ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ಹ.ಬ/ವಿವಾದ: 281:2010-11 ದಿ: 20-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**
ಡಿ. ಲಕ್ಷ್ಮಣ ತಂದೆ: ಡಿ. ರಾಮಣ್ಣ ಲೇಟ್
ಬೂದುಗುಪ್ಪ ಗ್ರಾಮ
ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**
ಡಿ. ಯಂಕಪ್ಪ ತಂದೆ: ಮಾರೆಣ್ಣ
ಬೂದುಗುಪ್ಪ ಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಬೂದುಗುಪ್ಪ ಗ್ರಾಮ | 273/A | 4-26 | 126/09-10 | 128/09-10 |
| | 284 | 4-43 | | |

ಪೀಠಿಕೆ:-

ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ಸ.ನಂ.273/A ವಿಸ್ತೀರ್ಣ **4-26, ಮತ್ತು 284** ವಿಸ್ತೀರ್ಣ 4-43 ಎಕರೆ ಜಮೀನಿಗೆ ಸಂಬಂಧಿಸಿದಂತೆ ವೀಲುನಾಮ ಪತ್ರ ಪ್ರಕಾರ ಡಿ.ಲಕ್ಷ್ಮಣ ತಂದೆ: ರಾಮಣ್ಣ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಡಿ. ಯಂಕಪ್ಪ ತಂದೆ: ಮಾರೆಣ್ಣ ಬೂದುಗುಪ್ಪ ಗ್ರಾಮ ಇವರು ದಿ: 19-3-2016ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **27-9-2010** ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು. ವಾದಿಗಳು ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಸಿರುಗುಪ್ಪ ನ್ಯಾಯಾಲಯದ ಸೂಟ್ ನಂ: 33/2010 ರನ್ವಯ ವಿಚಾರಣಾ ಹಂತದಲ್ಲಿ ಇರುತ್ತದೆ ಎಂದು ದಾಖಲೆ ಸಲ್ಲಿಸಿದ್ದು ಸದ್ರಿ ಪ್ರಕರಣವನ್ನು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ವಿಚಾರಣೆಯನ್ನು ಅಂತಿಮ ಆದೇಶ ನೀಡುವವರೆಗೂ ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ತಡೆಹಿಡಿಯಲಾಗಿರುತ್ತದೆ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿರುಗುಪ್ಪ ಇವರ ಸೂಟ್ ನಂ: 33/2010 ರ ಅಂತಿಮ ತೀರ್ಪು ವಾದಿಗಳ ಪರವಾಗಿ ಡಿಕ್ರಿ ಆದೇಶ ದಿ:1-7-2015 ರಂದು ನೀಡಿದ ಆದೇಶ ಪ್ರತಿಯನ್ನು ವಾದಿಗಳಾದ ಡಿ.ಲಕ್ಷ್ಮಣ ತಂದೆ: ಡಿ.ರಾಮಣ್ಣ ಇವರು ದಿ: **4-5-2016 ರಂದು ಉಪ ತಹಶೀಲ್ದಾರರು** ಕರೂರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಸಿವಿಲ್ ನ್ಯಾಯಾಲಯದ ಆದೇಶದ ಮೇರೆಗೆ **ಬೂದುಗುಪ್ಪ ಗ್ರಾಮದ** ಸ.ನಂ.273/A ವಿಸ್ತೀರ್ಣ **4-26,** **ಮತ್ತು 284** ವಿಸ್ತೀರ್ಣ 4-43 **ಎಕರೆ ಜಮೀನು ಡಿ. ಲಕ್ಷ್ಮಣ ತಂದೆ: ಡಿ. ರಾಮಣ್ಣ ಲೇಟ್** ಅವರ ಹೆಸರಿಗೆ ಸಿವಿಲ್ ನ್ಯಾಯಾಲಯದ **ಆದೇಶ ಮತ್ತು** ವೀಲುನಾಮಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## <u>ಆದೇಶ</u>

**ಪೀಠಿಕೆಯಲ್ಲಿ** ವಿವರಿಸಿದಂತೆ ಸಿರುಗುಪ್ಪ ತಾಲೂಕಿನ **ಬೂದುಗುಪ್ಪ ಗ್ರಾಮದ** ಸ.ನಂ.273/A ವಿಸ್ತೀರ್ಣ **4-26, ಮತ್ತು 284** ವಿಸ್ತೀರ್ಣ 4-43 ಎಕರೆ ಜಮೀನು ವೀಲುನಾಮಪತ್ರ ಹಾಗೂ ಸಿವಿಲ್ ನ್ಯಾಯಾಲಯದ ಆದೇಶ ಪ್ರಕಾರ ಡಿ.ಲಕ್ಷ್ಮಣ ತಂದೆ: **ಡಿ.ರಾಮಣ್ಣ ಅವರ ಹೆಸರಿಗೆ** ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20-05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

20/5/16

ಉಪ ತಹಶೀಲ್ದಾರರು.

ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಕರೂರು

ಸಿರುಗುಪ್ಪ ತಾಲೂಕು

<u>ಇದರ ಪ್ರತಿಯನ್ನು:</u>

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕೆ
3. ಕಛೇರಿ ಕಡತಕ್ಕೆ